(೮) ಸುಳ್ಯ ತಾಲ್ಲೂಕಿನ ಹರಿಹರ ಪಳ್ಳತ್ತಡ್ಕ ಗ್ರಾಮಗಳ ಹರಿಜನರಿಗೆ ಆರಣ್ಯ ಇಲಾಖೆ ಅಧಿಕಾರಿಗಳಿಂದ ಕಿರುಕುಳ

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೆ, ಸುಳ್ಯ ತಾಲ್ಲೂಕಿನ ಹರಿಹರ ಪಳ್ಳತ್ತಡ್ಕ ಗ್ರಾಮಗಳಲ್ಲಿ ಸುಮಾರು ೧೦ ವರ್ಷಗಳಿಗೆ ಮೇಲ್ಪಟ್ಟು ಸರಕಾರಿ ಸ್ಥಳದಲ್ಲಿ ಗೈಮೆ ಮಾಡಿ ಅನುಭವಿಸಿ ಕೊಂಡು ಬರುತ್ತಿರುವ ಕೆಲವು ಬಡ ಹರಿಜನ ಕುಟುಂಬಗಳನ್ನು ಅರಣ್ಯ ಇಲಾಖೆಯವರು ಅವ್ಯಾಚ್ಯ ಶಬ್ದಗಳಿಂದ ಬೈದು, ಹೆದರಿಸಿ, ಗುಡಿಸಲನ್ನು ಕಿತ್ತು ತೆಗೆಯಬೇಕು, ಮತ್ತು ಪಕ್ಕಲು ಎದ್ದು ಹೋಗ ಬೇಕು, ಇಲ್ಲವಾದರೆ ಪೋಲೀಸರನ್ನು ತರಿಸಿ, ಮನೆ ಕೀಳಿಸಿ ತೆಗೆಸುತ್ತೇವೆ ಎಂದು ಬೆದರಿಕೆ ಹಾಕುತ್ತಾರೆ ಎಂದು ತಿಳಿದು ಬರುತ್ತದೆ. ಸದರಿ ಕುಟುಂಬ ಸದರಿ ಜಮೀನುಗಳಲ್ಲಿ ೧೦ ವರ್ಷಗಳಿಂದ ಅನುಭವ ಮಾಡಿ ಕೃಷಿ ವಗೈರೆ ಮಾಡಿಕೊಂಡು ಬರುತ್ತಿರುವಾಗ ಈ ತನಕ ಕಣ್ಣುಮುಚ್ಚಿ ಕುಳಿತ ಅರಣ್ಯ ಇಲಾಖೆ ಈಗ ದಿಢೀರನೆ, ಸವಾರಿ ಮಾಡುತ್ತಿರುವುದನ್ನು ನೋಡಿದರೆ ತುಂಬಾ ಬೇಸರದ ಸಂಗತಿ ಅದರಲ್ಲೂ ಈ ಬಡ ಹರಿಜನ ಕುಟುಂಬದವರ ಮೇಲೆ ಮಾತ್ರ ಈ ರೀತಿ ಸವಾರಿ ಮಾಡುತ್ತಿರುವುದನ್ನು ತುಂಬಾ ಅನ್ಯಾಯ ಈ ಬಡ ಕುಟುಂಬಗಳಲ್ಲದೆ, ಇನ್ನಿತರ ಶ್ರೀಮಂತ ವರ್ಗದವರು ಸರಕಾರಿ ಸ್ಥಳವನ್ನು ಆಗು ಮಾಡಿದಕೆಕುಟುಂಬಗಳು ಇರುವುದಿಲ್ಲವೇ? ಆಲ್ಲದೆ ಸರಕಾರಿಜಮೀನು ಆಗುಮಾಡಿದವರನ್ನು ಸದ್ಯ ಪಕ್ಕಲು ಎಬ್ಬಿಸಬಾರದು ಎಂದು ಕಾನೂನು ತಂದಿದ್ದರೂ, ಈ ರೀತಿಯಿಂದ ಅನ್ಯಾಯವಾಗುತ್ತಿದೆ. ಮುತ್ತು ಅಲಟ್ಟಿ ಎಂಬ ಗ್ರಾಮದಲ್ಲಿ ೨ ವರ್ಷದಿಂದ ಆಗು ಮಾಡಿದ ೩ ಕುಟುಂಬಗಳನ್ನು ಕೂಡ ಈಗಾಗಲೇ ಗುಡಿಸಲನ್ನು ತೆಗೆಸಿ ಪಕ್ಕಲು ಎಬ್ಬಿಸಿದ್ದಾರೆ. ಈ ಕುಟುಂಬಗಳಿಗೆ ಪರ್ಯಾಯವಾಗಿ ಮನೆ ನಿವೇಶನ ಕೂಡ ಕೊಟ್ಟಿರುವುದಿಲ್ಲ. ಆದುದರಿಂದ ಈ ರೀತಿಯ ತೊಂದರೆಯನ್ನು ಕೂಡಲೇ ತಡೆಗಟ್ಟಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ. ಎ. ಜೀವಿಜಯ.—ಅವರು ಬೇಸರಪಡುವುದು ಬೇಡ. ೧೯೭೮ರ ಹಿಂದೆಯೇ ಯಾರು ಈ ರೀತಿ ಅತಿಕ್ರಮಣ ಮಾಡಿದ್ದಾರೆ ಅವರನ್ನು ಒಕ್ಕಲೆಬ್ಬಿಸಬಾರದೆಂದು ಸೂಚನೆ ಕೊಟ್ಟಿದ್ದೇನೆ.

೬. ವಿತ್ತೀಯ ಕಾರ್ಯಕಲಾಪಗಳು ೧೯೮೬–೮೭ ಬೇಡಿಕೆಗಳ ಮಂಡನೆ

ಅಧ್ಯಕ್ಷರು.—ಮಾನ್ಯ ಸಚಿವರುಗಳು ಅವರುಗಳಿಗೆ ಸಂಬಂಧಪಟ್ಟಂತಹ ಬೇಡಿಕೆ ನಂ. ೫೫, ೫೬, ೫೪, ೫೭, ೫೮, ೫೯, ೫೯ ಹಾಗೂ ೬೦ ನಂಬರ್‌ನ ಬೇಡಿಕೆಗಳನ್ನು ಸಭೆಯಲ್ಲಿ ಮಂಡಿಸಬೇಕು.

ಅಭಿಯಾಚನೆ ಕ್ರಮಾಂಕ ೫೫.—ಸಹಕಾರ (ಕ್ರಮುಪಡಿಸಿದ ಮಾರುಕಟ್ಟೆಗಳ ಹೊರತು)

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಹಕಾರಕ್ಕೆ (ಕ್ರಮ ಪಡಿಸಿದ ಮಾರುಕಟೆಗಳ ಹೊರತು) ಸಂದಾಯ ಮಾಡಬಲ್ಲಿ ಬರತಕ್ಕಂತಹ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೮,೯೩,೨೫,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೪,೩೦,೫೫,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೫೬ ಕ್ರಮಪಡಿದ ಮಾರುಕಟ್ಟೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕ್ರಮಪಡಿಸಿದ ಮಾರುಕಟ್ಟೆಗಳಿಗೆ, ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೬,೪೭,೮೧,೮೧೧,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.